**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ.3268/2018**

ಪಿರ್ಯಾದುದಾರರುಃ ಬಸವರಾಜ ದುಂಡಪ್ಪ ಜಿನರಾಳ
42 ವರ್ಷ, ಸಾಃ ಗೋಕಾಕ.

- ವಿರುದ್ದ -

ಆರೋಪಿ: ಸಂಗಮೇಶ ಸದಾಶೀವಯ್ಯ ಹಿರೇಮಠ,
40 ವರ್ಷ, ವಾಸಃ ಗೋಕಾಕ, ತಾಃ ಗೋಕಾಕ.

**ದಂಡ ಪ್ರಕ್ರಿಯೆ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿತರ ಹೇಳಿಕೆ**

ಪ್ರಶ್ನೆ 1. ಪಿರ್ಯಾದುದಾರರ ಪರ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ 2. ಪ್ರಾ.ಸಾ.1/ಬಸವರಾಜ ದುಂಡಪ್ಪ ಜಿನರಾಳ, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಫಾರ್ಮಸಿಗೆ ಸಂಬಂಧಿಸಿದ ವ್ಯಾಪಾರವನ್ನು ಮಾಡುತ್ತಿರುವುದರಿಂದ ಒಳ್ಳೆಯ ಪರಿಚಯಸ್ಥರಿರುತ್ತಿರಿ, ಹೀಗಿರುವಾಗ ಆರೋಪಿಯಾದ ನೀವು ನಿಮ್ಮ ವ್ಯಾಪಾರದ ಅಭಿವೃದ್ಧಿ ಸಲುವಾಗಿ ಪಿರ್ಯಾದುದಾರರಿಗೆ ಜನೆವರಿ-2017 ರಂದು ಹಣವನ್ನು ಹೂಡಿಕೆ ಮಾಡುವಂತೆ ಕೇಳಿಕೊಂಡಿರುತ್ತಿರಿ, ಅದಕ್ಕೆ ಈ ಸಾಕ್ಷಿದಾರರು ಒಪ್ಪಿಕೊಂಡ ಮೇರೆಗೆ ಸದರಿ ವ್ಯಾಪಾರದಲ್ಲಿ ನೀವು ಮತ್ತು ಅವರು ಪಾಲುದಾರರಾಗಿರುತ್ತಿರಿ. ನಂತರ ಈ ಸಾಕ್ಷಿದಾರರು ನಿಮ್ಮ ಮಾತನ್ನು ನಂಬಿ ರೂ.2,00,000/- ದಿಃ 23.01.2017 ರಂದು ಚೆಕ್ ನಂ.726834 ನ್ನು, ರೂ.6,00,000/- ದಿಃ 04.02.2017 ರಂದು ಚೆಕ್ ನಂ.726835 ನ್ನು, ರೂ.3,00,000/- ದಿಃ 14.02.2017 ರಂದು ಚೆಕ್ ನಂ.726837 ನ್ನು ಮತ್ತು ರೂ.2,00,000/- ದಿಃ 21.02.2017 ರಂದು ಚೆಕ್ ನಂ.726838 ನ್ನು ಒಟ್ಟು ರೂ.13,00,000/- ಗಳನ್ನು ಚೆಕ್ ಮುಂಖಾಂತರ ಆರೋಪಿಯಾದ ನಿಮಗೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 3. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ದಿಃ 28.03.2017 ರಂದು ಸದರಿ ವ್ಯಾಪರಕ್ಕೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಂಡು ಸಾಲಗಾರರಿಗೆ ಪಾವತಿಸುವ ಮೊದಲು ಈ ಸಾಕ್ಷಿದಾರರಿಗೆ ಮರು ಪಾವತಿ ಮಾಡಬೇಕು ಹಾಗೂ ಒಂದು ವೇಳೆ ನೀವು ನಿಮ್ಮ ವ್ಯಾಪಾರವನ್ನು ಮುಚ್ಚಬೇಕಾದ ಸಂದರ್ಭ ಬಂದಾಗ ಯುನೈಟೆಡ್ ಫಂಡ್‌ನಿಂದ ಸಾಧಿಸಿದ ಟರ್ನ್ ಓವರ್ ನ ಒಟ್ಟು 40% ಲಾಭವನ್ನು ಈ ಸಾಕ್ಷಿದಾರರಿಗೆ ಪಾವತಿಸಲು ಒಪ್ಪಿಕೊಂಡಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 4. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿಃ 08.08.2018 ರಂದು ಈ ಸಾಕ್ಷಿದಾರರು ಆರೋಪಿಯಾದ ನಿಮಗೆ ಸದರಿ ಸಾಲದ ಹಣವನ್ನು ಮರಳಿ ನಿಡುವಂತೆ ಕೇಳಿಕೊಂಡಾಗ ನೀವು ದಿಃ 08.08.2018 ರಂದು ನಿಮ್ಮ ಖಾತೆಯಿರುವ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಶಾಖೆಃ ಗೋಕಾಕ ಇಲ್ಲಿಗೆ ಸೇರಿದ ಚೆಕ್ ನಂ.001095 ನ್ನು ರೂ.13,00,000/- ಎಂದು ನಮೂದು ಮಾಡಿ ಈ ಸಾಕ್ಷಿದಾರರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ 5. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದಂತ ಚೆಕ್ಕನ್ನು ನಗದೀಕರಣಕ್ಕಾಗಿ ಅವರು ತಮ್ಮ ಖಾತೆಯಿರುವ ಕೆನರಾ ಬ್ಯಾಂಕ್, ಗೋಕಾಕ ಶಾಖೆ, ಇಲ್ಲಿಗೆ ಹಾಜರುಪಡಿಸಿದಾಗ, ''ಆರೋಪಿಯಾದ ನಿಮ್ಮ ಅಕೌಂಟ್ ಬ್ಲಾಕ್ಡ್ ಸಿಚುವೇಷನ್ ಕವರ್ಡ 2125'' ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 10.08.2018 ರಂದು ಸದರಿ ಚೆಕ್ ಅಮಾನ್ಯಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ 6. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದ ಚೆಕ್ ಅಮಾನ್ಯಗೊಂಡ ಬಗ್ಗೆ ಈ ಸಾಕ್ಷಿದಾರರು ತಮ್ಮ ವಕೀಲರ ಮುಖಾಂತರ ದಿನಾಂಕ 05.09.2018 ರಂದು ತಿಳುವಳಿಕೆ ಪತ್ರವನ್ನು ನೋಂದಾಯಿತ ಅಂಚೆ ಮೂಲಕ ಆರೋಪಿಯಾದ ನಿಮಗೆ ಕಳುಹಿಸಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ 7. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದಂತ ಚೆಕ್ಕನ್ನು ನಿ.ಪಿ.1, ಅದರಲ್ಲಿರುವ ಸಹಿಯನ್ನು ನಿಪಿ.1(ಎ), ಬ್ಯಾಂಕ್‌ನವರು ನೀಡಿದಂತಹ ಹಿಂಬರಹವನ್ನು ನಿಪಿ.2, ತಿಳುವಳಿಕೆ ಪತ್ರದ ಕಛೇರಿ ಪ್ರತಿಯನ್ನು ನಿಪಿ.3, ಅಂಚೆ ರಶೀದಿಯನ್ನು ನಿಪಿ.4, ಅಂಚೆ ಲಕೋಟೆಯನ್ನು ನಿಪಿ.5, ಅದರಲ್ಲಿರುವ ತಿಳುವಳಿಕೆ ಪತ್ರವನ್ನು ನಿಪಿ.5(ಎ), ಕರಾರು ಪತ್ರವನ್ನು ನಿಪಿ.6 ಮತ್ತು ಕೆನರಾ ಬ್ಯಾಂಕಿನ ಬ್ಯಾಂಕ್ ಪುಸ್ತಕವನ್ನು ನಿಪಿ.7 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ 8. ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ ?

ಉತ್ತರಃ

ಪ್ರಶ್ನೆ 9.  ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದೆಯಾ?

ಉತ್ತರಃ

(ದಿಃ 04.02.2023 ರಂದು ಮೇಲಿನ ಹೇಳಿಕೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ನಂತರ ಆರೋಪಿ ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಡೀಕರಿಸುತ್ತೇನೆ.)

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**